ಓ.ಎಸ್.ನಂ.66/2014
ಪಿ.ಡಬ್ಲ್ಯೂ-01

**ಸಾಕ್ಷಿಯನ್ನು ದಿಃ 23.11.2024 ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ 4 ಪರ ಶ್ರೀM.G.ವಕೀಲರಿಂದ.**

ನಾನು ವಿಧ್ಯಾಬ್ಯಾಸ ಮಾಡಿರುವುದಿಲ್ಲ. ನನ್ನ ಮಗ ಸಹಿ ಮಾಡುವುದನ್ನು ಕಲಿಸಿರುತ್ತಾನೆ. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ಈ ಪ್ರಕರಣದಲ್ಲಿ ವಾದಿ 1, 2, ಮತ್ತು 4 ಅವರ ಪರವಾಗಿ ಸಾಕ್ಷಿ ನುಡಿಯಲು ನನಗೆ ಅಧಿಕಾರ ಪತ್ರವನ್ನು ನೀಡಿದ್ದು ಅದನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ವಾದಿ 1, 2, ಮತ್ತು 4 ಅವರ ನನಗೆ ಯಾವುದೇ ಅಧಿಕಾರ ಪತ್ರ ಬರೆದು ಕೊಟ್ಟಿಲ್ಲ ಅದನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲವೆಂದರೆ ಸರಿಯಲ್ಲ.

ನಾನು ಹುಟ್ಟಿದ್ದು ಜಲದಗೇರೆ ಗ್ರಾಮದಲ್ಲಿ ಜನಿಸಿರುತ್ತೇನೆ. ಯಾವ ವರ್ಷವೆಂದು ನನಗೆ ಗೊತ್ತಿಲ್ಲ. ವಾದಿ 2 ಮತ್ತು 4 ಸಹ ಶಾಲೆ ಕಲಿತಿರುವುದಿಲ್ಲ. ಅವರು ಸಹ ಜಲದಗೆರೆಯಲ್ಲಿ ಜನಿಸಿರುತ್ತಾರೆ. ಈ ದಿನ ನ್ಯಾಯಾಲಯದಲ್ಲಿ ಪ್ರತಿವಾದಿ 1, 4 ಮತ್ತು 7 ಹಾಜರು ಇರುತ್ತಾರೆ. ಅವರನ್ನು ಹೊರತು ಪಡಿಸಿ ದಾವೆಯನ್ನು ಚಂದ್ರಮ್ಮಾ, ಚಿಕ್ಕಮ್ಮಾ , ತನುಶ್ರೀ, ಅರ್ಪಿತಾ, ಮಂಜುನಾಥ ಮತ್ತು ಉಮಾ ಅವರ ವಿರುದ್ದ ದಾಖಲು ಮಾಡಿರುತ್ತೇನೆ. ದಾವೆಯನ್ನು ಭಾಗಾಂಶ ಕೋರಿ ಸಲ್ಲಿಸಿರುತ್ತೇನೆ.

69/3 ರಲ್ಲಿ 1 ಎಕರೆ 8 ಗುಂಟೆ ಮತ್ತು 69/4 ರಲ್ಲಿ 3 ಎಕರೆ 30 ಗುಂಟೆಗೆ ಸಂಬಂಧಿಸಿದದಂತೆ ದಾವೆ ದಾಖಲು ಮಾಡಿರುತ್ತೇನೆ. ಸದರಿ ಜಮೀನುಗಳ ಚಕ್ಕುಬಂದ ಪೂರ್ವಕ್ಕೆ ಗಿರಿಯಪ್ಪ ಅವರ ಜಮೀನು, ಪಶ್ಚಿಮಕ್ಕೆ ತಿಮ್ಮಣ್ಣ ಅವರ ಜಮೀನು, ಉತ್ತರಕ್ಕೆ ಕುಂಬಾರ ಎಳವಯ್ಯ ಅವರ ಜಮೀನು ಮತ್ತು ದಕ್ಷಿಣಕ್ಕೆ ಚಿಕ್ಕಮಾರಪ್ಪ ಅವರ ಜಮೀನು ಇರುತ್ತದೆ. ಈ ಮೇಲೆ ಹೇಳಿದ ಜಮೀನು ಮತ್ತು ಚಕ್ಕುಬಂದಿಗೆ ಸಂಬಂಧಿಸಿದಂತೆ ಯಾವ ದಾಖಲಾತಿಯನ್ನು ನೀವು ನೋಡಿರುತ್ತೀರಿ ಎಂದರೆ ಸಾಕ್ಷಿ ನನ್ನ ತಂದೆಯವರಿಂದ ತಿಳಿದುಕೊಂಡಿರುತ್ತೇನೆಂದು ಹೇಳುತ್ತಾರೆ. ಬುದ್ದಿ ಬಂದ ಮೇಲೆ 10 -12 ವರ್ಷದವನು ಇದ್ದಾಗ ನನ್ನ ತಂದೆಯವರಿಂದ

ತಿಳಿದುಕೊಂಡಿದ್ದೇನೆಂದು ಹೇಳುತ್ತಾರೆ. ನನ್ನ ತಂದೆಯ ಹೆಸರು ತಿಮ್ಮಯ್ಯ ಅವರ ತಂದೆಯ ಹೆಸರು ಸಹ ತಿಮ್ಮಯ್ಯ ಆಗಿರುತ್ತದೆ. ನನ್ನ ತಂದೆ 2002 ರಲ್ಲಿ ರಾಮೋಹಳ್ಳಿಯಲ್ಲಿ ಮರಣ ಹೊಂದಿರುತ್ತಾರೆ. ನನ್ನ ತಾತ ಯವಾಗ ಮರಣ ಹೊಂದಿದ್ದಾರೆಂದು ನನಗೆ ಗೊತ್ತಿಲ್ಲ. ನಾನು ಅವರನ್ನು ನೋಡಿರುವುದಿಲ್ಲ. ನನ್ನ ಅಜ್ಜಿಯ ಹೆಸರು ರಂಗಮ್ಮಾ ಆಗಿದ್ದು ಅವರು ಯಾವಾಗ ಮರಣ ಹೊಂದಿರುತ್ತಾರೆಂದು ನನಗೆ ಗೊತ್ತಿಲ್ಲ ಅವರಿಗೂ ಸಹ ನಾನು ನೋಡಿರುವುದಿಲ್ಲ.

ನನ್ನ ತಂದೆ 2002 ರಲ್ಲಿ ಮರಣ ಹೊಂದಿರುವ ಪೂರಕ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಸಿಡಿರುವುದಿಲ್ಲ ಮತ್ತು ನಾನು ಇಲ್ಲಿಯವರೆಗೆ ಮರಣ ಪ್ರಮಾಣ ಪತ್ರ ಪಡೆದಿರುವುದಿಲ್ಲ. ನನ್ನ ತಂದೆ ಮನೆಯಲ್ಲಿಯೇ ಮರಣ ಹೊಂದಿರುತ್ತಾರೆ. ನನ್ನ ತಂದೆಯ ಅಂತ್ಯ ಸಂಸಾರವನ್ನು ರಾಮೋಹಳ್ಳಿಯ ಸ್ಮಶಾನದಲ್ಲಿ ಮಾಡಿರುತ್ತೇನೆ. ನನ್ನ ತಂದೆ ಮರಣ ಹೊಂದಿರುವ ವಿಷಯವನ್ನು ಪಂಚಾಯಿತಿಗೆ ತಿಳಿಸಿರುತ್ತೇವೆ. ವಾದಿ 1, 2  4 ಮತ್ತು ನನ್ನ ಖಾಯಂ ವಾಸ ರಾವೋಹಳ್ಳಿ ಬೆಂಗಳೂರು ಆಗಿರುತ್ತದೆ. ನನ್ನ ತಂದೆ ಕಾಲದಿಂದಲೂ ನಾವು ಬೆಂಗಳೂರಿನ ರಾಮೋಹಳ್ಳಿಯಲ್ಲಿ ವಾಸವಾಗಿದ್ದು ಚುನಾವಣೆ ಗುರುತಿನ ಚೀಟಿ, ಪಡಿತರ ಚೀಟಿ ಮತ್ತು ಆಧಾರ ಕಾರ್ಡ ಅಲ್ಲಿದೆ ಇರುತ್ತದೆ ಎಂದು ಹೇಳುತ್ತಾರೆ.

ನನ್ನ ತಂದೆ ಮದ್ಯ ಮಾರಾಟ ಮಾಡುತ್ತಿದ್ದರು. ಮೊದಲು ಜಲದಗೆರೆಯಲ್ಲಿ ಮಾರಾಟ ಮಾಡುತ್ತಿದ್ದು ಬೆಂಗಳೂರಿನಲ್ಲಿ ಯಾವುದೇ ಕೆಲಸ ಮಾಡುತ್ತಿರಲಿಲ್ಲ. ನನ್ನ ತಂದೆ ಮತ್ತು ನಾನು ಜಲದಗೆರೆಯಲ್ಲಿ ವಾಸ ಇದ್ದ ಬಗ್ಗೇ ಯಾವುದಾದರೂ ದಾಖಲೆಗಳು ಇವೆಯಾ ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಯಾವುದೇ ದಾಖಲೆಗಳು ಇಲ್ಲವೆಂದು ಹೇಳುತ್ತಾರೆ.  ನಾನು ಮತ್ತು 4 ನೇ ವಾದಿ ಗಾರೇ ಕೆಲಸ ಮಾಡಿರುತ್ತೇವೆ. 2 ನೇ ವಾದಿಯನ್ನು ಮಂಡ್ಯದಲ್ಲಿರುವ ಕೊಪ್ಪಕ್ಕೆ ಕೊಟ್ಟು ಮದುವೆ ಮಾಡಿದ್ದು ಅವರ ಗಂಡನ ಮರಣಾನಂತರ ಅವರು ಸಹ ನಮ್ಮ ಮನೆಯಲ್ಲಿದ್ದಾರೆಂದು ಹೇಳುತ್ತಾರೆ.

ನಾನು ಮತ್ತು ಇತರ ವಾದಿಗಳು ದಾವೆ ದಾಖಲು ಮಾಡಲು ಮಾಹಿತಿಯನ್ನು ನೀಡಿರುತ್ತೇವೆ. ಈ ದಾವೆ ಸಲ್ಲಿಸಿದ ನಂತರ ತನುಶ್ರೀ, ಅರ್ಪಿತಾ ಮತ್ತು ಮಂಜುನಾಥ ಅವರು ಅರ್ಜಿ ಸಲ್ಲಿಸಿ ಪಕ್ಷಗಾರರನ್ನಾಗಿ ಮಾಡಿರುತ್ತೇನೆ. ವಾದ ಪತ್ರದಲ್ಲಿ ತೋರಿಸಿರುವ ವಿಳಾಸದಲ್ಲಿ ವಾಸ ಮಾಡುತ್ತಿರುವ ಬಗ್ಗೆ ನ್ಯಾಯಾಲಯಕ್ಕೆ ಯಾವುದೆ ದಾಖಲೆ ನೀಡಿರುವುದಿಲ್ಲ.  ನನ್ನ ಬಳಿ ಮೂಲ ಪಡಿತರ ಚೀಟಿ ಚುನಾವಣಾ ಗುರುತಿನ ಚೀಟಿ ಇದ್ದು ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇರುವುದಿಲ್ಲ.

ದಾವೆ ಸಲ್ಲಿಸುವ ಮೊದಲು ಪ್ರತಿವಾದಿಗಳಿಗೆ ಯಾವುದೇ ನೋಟಿಸ್ ನೀಡಿರುವುದಿಲ್ಲ. ಪ್ರತಿವಾದಿ 1 ಮತ್ತು 4 ಅವರು ಶಿವಮೊಗ್ಗದಲ್ಲಿ ವಾಸ ಮಾಡುತ್ತಿದ್ದು ಪ್ರತಿವಾದಿ 7 ಯಡಿಯೂರು ನಲ್ಲಿದ್ದು ಪ್ರತಿವಾದಿ 5 ಬೆಳ್ಳೂರಿನ ಆರಣಿ ಯಲ್ಲಿ ವಾಸ ಮಾಡುತ್ತಿದ್ದಾರೆ ಪ್ರತಿವಾದಿ 6 ಮೈಸೂರಿನಲ್ಲಿ ವಾಸ ಮಾಡುತ್ತಿದ್ದಾರೆ ಎಂದು ಹೇಳುತ್ತಾರೆ.

**ಮುಂದುವೆರದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ
ಕುಣಿಗಲ್.